ಇ) ಹಂತ ಹಂತವಾಗಿ ಹಣಕಾಸಿನ ಲಭ್ಯತೆಗನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

ಕಳ್ಳಭಟ್ಟಿ ದಂಧೆ

758 (1409) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳ್ಳಭಟ್ಟಿ ದಂಧೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಕರಣಗಳು ವರದಿಯಾಗಿವೆ (ವಿವರ ನೀಡುವುದು);

ಆ) ಈ ಪ್ರಕರಣಗಳಲ್ಲಿ ಸಾವು–ನೋವಿನ ಸಂಖ್ಯೆ ಎಷ್ಟು;

ಇ) ಕಳ್ಳಭಟ್ಟಿ ದಂಧೆಯನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ.ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಬಂದಿದೆ.

ರಾಜ್ಯಾದ್ಯಂತ 2009ರ ಜುಲೈ ನಿಂದ 2010ರ ಜನವರಿವರೆಗೆ ಒಟ್ಟು 2033 ಪ್ರಕರಣಗಳು ದಾಖಲಾಗಿರುತ್ತದೆ. (ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಆ) ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಅಮ್ಮಗಾರಿ ಪೇಟೆ ಗ್ರಾಮದಲ್ಲಿ ದಿ: 04–02–2010 ರಂದು ಶಂಕಿತ ಕಳ್ಳಭಟ್ಟಿ ಸೇವನೆಯಿಂದ ಐವರು ಮೃತಪಟ್ಟಿರುತ್ತಾರೆ.

ಇ) ಜಾರಿ ಮತ್ತು ತನಿಖಾ ಕಾರ್ಯವನ್ನು ಚುರುಕುಗೊಳಿಸಲಾಗಿದೆ. ರಾಜ್ಯಾದ್ಯಂತ 2118 ಕಳ್ಳಭಟ್ಟಿ ಕೇಂದ್ರಗಳನ್ನು ಗುರುತಿಸಿದ್ದು, ಇವುಗಳನ್ನು ಸಣ್ಣ, ಮಧ್ಯಮ ಹಾಗೂ ದೊಡ್ಡ ಕೇಂದ್ರಗಳಾಗಿ ವಿಂಗಡಿಸಿ ಸಮಸ್ಯೆಯ ತೀವ್ರ ಮತ್ತು ಇತರೆ ಸನ್ನಿವೇಶಗಳನ್ನು ಆಧರಿಸಿ ಸಮಸ್ಯೆಯನ್ನು ಪೂರ್ಣವಾಗಿ ನಿವಾರಿಸಲು ಕ್ರಿಯಾಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಳ್ಳಭಟ್ಟಿ ಕೇಂದ್ರ ಗಳೆಂದು ಗುರುತಿಸಲಾಗಿರುವ ಸ್ಥಳಗಳ ಮೇಲೆ ಸತತವಾಗಿ ದಾಳಿಗಳನ್ನು ನಡೆಸಲಾಗುತ್ತಿದೆ. ರಾಜ್ಯಾದ್ಯಂತ ಇರುವ 6002 ಗ್ರಾಮ ಪಚಾಯ್ತಿ ವ್ಯಾಪ್ತಿಯಲ್ಲಿ ಕಳ್ಳಭಟ್ಟಿ/ಸಾರಾಯಿ ಸೇವೆಯ ದುಷ್ಪರಿಣಾಮಗಳ ಬಗ್ಗೆ ಜನಜಾಗೃತಿ ಸಭೆ ಏರ್ಪಡಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕ್ರಮ

ಕೈಗೊಳ್ಳಲಾಗಿದೆ. ರಾಜ್ಯಾದ್ಯಂತ 1890 ಮಾರ್ಗಗಳನ್ನು ರಚಿಸಿ 14363 ಪಾಯಿಂಟ್ ಪುಸ್ತಕಗಳನ್ನು ನಿರ್ವಹಿಸಲಾಗಿದೆ. ಹಾಗೂ 21619 ಹಳೆಯ ಆರೋಪಿಗಳ ಚಲನವಲನಗಳ ಮೇಲೆ ನಿಗಾ ಇರಿಸಲು ಕ್ರಮ ಕೈಗೊಳ್ಳಲಾಗಿದೆ. ಗ್ರಾಮ ಪಂಚಾಯ್ತಿ ಸದಸ್ಯರು, ಕಂದಾಯ ಇಲಾಖೆ ಅಧಿಕಾರಿಗಳು, ಸ್ತ್ರೀ ಶಕ್ತಿ ಸಂಘಗಳು ಹಾಗೂ ಯುವಕ ಸಂಘಗಳನ್ನೊಳ ಗೊಂಡಂತೆ ಪ್ರಮುಖರಿಗೆ ಅಬಕಾರಿ ಕಾಯಿದೆ ಕಲಂ 50 ರನ್ವಯ ತಿಳುವಳಿಕೆ ಪತ್ರಗಳನ್ನು ನೀಡಿ ಅಬಕಾರಿ ಅಕ್ರಮಗಳ ಬಗ್ಗೆ ಇಲಾಖೆಗೆ ಮಾಹಿತಿ ನೀಡಲು ಕೋರಲಾಗಿದೆ. ಮತ್ತು ಭಿತ್ತಿ ಪತ್ರಗಳನ್ನು ಸಾರ್ವಜನಕರಿಗೆ ಹಂಚಿ ಸಾರ್ವಜನಿಕರೇ ಇಂತಹ ಪ್ರಕರಣಗಳಿದ್ದಲ್ಲಿ, ಇಲಾಖೆಗೆ ಮಾಹಿತಿ ನೀಡುವಂತೆ ಕೋರಿದೆ.

ಅನುಬಂಧ – 1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	2009–10	
		ನಡೆಸಿದ ದಾಳಿಗಳು	ದಾಖಲಿಸಿದ ಮೊಕದ್ದಮೆಗಳು
1	ಬೆಂಗಳೂರು ನಗರ	1409	24
2	ಬೆಂಗಳೂರು ಗ್ರಾ	1061	3
3	ಬಾಗಲಕೋಟೆ	1572	173
4	ಬೆಳಗಾಂ	2130	5
5	ಬಳ್ಳಾರಿ	1442	36
6	ಬೀದರ್	596	57
7	ಬಿಜಾಪುರ	762	85
8	ಚಾಮರಾಜನಗರ	6	6
9	ಚಿಕ್ಕಮಗಳೂರು	1747	199
10	ಚಿಕ್ಕಬಳ್ಳಾಪುರ	362	95
11	ಚಿತ್ರದುರ್ಗ	357	28
12	ದಕ್ಷಿಣ ಕನ್ನಡ	2376	34
13	ದಾವಣಗೆರೆ	1882	39
14	ಧಾರವಾಡ	1238	86
15	ಗದಗ	798	80

16	ಗುಲ್ಬರ್ಗ	1347	133
17	ಹಾಸನ	2611	94
18	ಹಾವೇರಿ	1318	35
19	ಕೊಡಗು	933	48
20	ಕೋಲಾರ	1293	106
21	ಕೊಪ್ಪಳ	3	25
22	ಮಂಡ್ಯ	1952	28
23	ಮೈಸೂರು	614	293
24	ರಾಯಚೂರು	1012	51
25	ರಾಮನಗರ	162	14
26	ಶಿವಮೊಗ್ಗ	959	108
27	ತುಮಕೂರು	1746	190
28	ಉಡುಪಿ	315	1
29	ಉತ್ತರ ಕನ್ನಡ	–	–
30	ಯಾದಗಿರಿ	346	10
ಒಟ್ಟು		**31117**	**2033**

ಸಾರ್ವಜನಿಕ ಗ್ರಂಥಾಲಯ

759 (1410) ಶ್ರೀ ಖಾದರ್. ಯು.ಟಿ. (ಮಂಗಳೂರು) : ಮಾನ್ಯ ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಸಾರ್ವಜನಿಕ ಗ್ರಂಥಾಲಯದಲ್ಲಿ ವಾಚಕರ ಸಂಖ್ಯೆ ಕಡಿಮೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ವಾಚಕರನ್ನು ಸೆಳೆಯಲು ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು;